# ನವಿಲುಗನ್ನಡಿ

- ‘ಮಯೂರ’ ಸಪ್ಟೆಂಬರ್ ಸಂಚಿಕೆಯಲ್ಲಿ ಪ್ರಾರಂಭವಾದ ಹೊಸ ಅಂಕಣ ‘ಪದ್ಯಪಲ್ಲವ’ ಹಿರಿಯ ಕವಿಗಳ ಕವಿತೆಗಳ ಮರುಓದಿಗೆ ನಾಂದಿ ಹಾಡಿದೆ. ಪದ್ಯದ ಕುರಿತು ಹಿರಿಯ ವಿಮರ್ಶಕರ ಅಭಿಪ್ರಾಯವನ್ನು ಪ್ರಕಟಿಸುತ್ತಿರುವುದು ಪದ್ಯಗಳ ಆಳವನ್ನು ಅರಿಯಲು ಸಹಕಾರಿಯಾಗುತ್ತದೆ. ಒಂದು ಭಾಷೆ ಬೆಳೆಯಲು ಇಂಥ ಹೊಸ ಪ್ರಯತ್ನಗಳು ಅವಶ್ಯಕ. ಈ ನಿಟ್ಟಿನಲ್ಲಿ ‘ಮಯೂರ’ದ ಹೆಜ್ಜೆ ಸೂಕ್ತವಾಗಿದೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**

- ಸೆಪ್ಟೆಂಬರ್ ಮುಖಪುಟ ಆಕರ್ಷಕವಾಗಿದ್ದು, ವಸುಮತಿ ಉಡುಪ ಅವರ ‘ಬೆನ್ನು’ ಕಥೆ ತುಂಬಾ ಇಷ್ಟವಾಯಿತು. ಸಾಮಾನ್ಯ ಜನರ ಮನೋಭಿಪ್ರಾಯ, ತನ್ನನ್ನು ತಾನು ವಿಮರ್ಶೆ ಮಾಡಿಕೊಂಡು ಬೆಳೆಯಲಾಗದೇ ಮತ್ತೊಬ್ಬರ ಬಗ್ಗೆ ಆಡುವ, ಮನದಲ್ಲಿ ಮೂಡುವ ಭಾವನೆಗಳು ಈ ಕಥೆಯಲ್ಲಿ ತುಂಬಾ ಚೆನ್ನಾಗಿ ಮೂಡಿಬಂದಿವೆ.

**ಹೊ.ನಾ. ಲಲಿತ, ಬೆಂಗಳೂರು**

- ‘ಚಾರಿತ್ರಿಕ ಸಂದರ್ಭ ಹೋರಾಟಗಳಲ್ಲಿ ಪಾಲ್ಗೊಳ್ಳುವ ಅವಕಾಶ ನನಗೆ ಸಿಕ್ಕಿತು’ ಲೇಖಕ ಅಗ್ರಹಾರ ಕೃಷ್ಣಮೂರ್ತಿ ಅವರ ಕುರಿತು ವಿಮರ್ಶಕಿ ಎಂ.ಎಸ್. ಆಶಾದೇವಿ ಅವರ ಮಾತುಕತೆ ಆಪ್ತವಾಗಿತ್ತು.

**ಬಸವರಾಜ ಹೂಗಾರ, ಹಿರೇಸಿಂಗನಗುತ್ತಿ**

- ‘ಪ್ರಾಯದ ಪಾಠ’ ಕವಿ ಟಿ.ಯಲ್ಲಪ್ಪ ಅವರ ಕವಿತೆ ಬಹಳ ಗಮನ ಸೆಳೆಯಿತು. ‘ಜೀವನಕ್ಕೇ ಪ್ರಾಯ ಬಂದಂತೆ ಹೂ ಬಿಟ್ಟು ನಿಂತ ಗಿಡವೇ… ಪ್ರಾಯ ಇರುವಾಗಲೇ ಒಮ್ಮೆ ಹಾಡಿಕೊಳ್ಳಿರಿ ನೀವೂ ಕೂಡ ಕವಿಯ ಈ ಹಾಡ…’ ವಿಚಾರ ಪ್ರಚೋದಕವೆನಿಸಿತು.

**ಅಕ್ಬರ್ ಸಿ. ಕಾಲಿಮಿರ್ಚಿ, ಕೊಪ್ಪಳ**

- ಚಿದಾನಂದ ಸಾಲಿಯವರ ಎರಡು ಕವಿತೆಗಳು ಸೊಗಸಾಗಿವೆ. ರಚನೆ ಅಭಿವ್ಯಕ್ತಿ ಮಾಧ್ಯಮವಾಗಿ ಹೊಸ ರೀತಿಯಲ್ಲಿ ತೆರೆದುಕೊಂಡಿದೆ.

**ಮಧುಕುಮಾರ ಸಿ.ಎಚ್., ಚಾಮನಹಳ್ಳಿ, ಮಂಡ್ಯ,**
ಎಸ್.ಆರ್.ನರಸಿಂಹ ಪ್ರಸಾದ್, ಕುಣಿಗಲ್




- ‘ಕಾವ್ಯಸಂಕ’ದಲ್ಲಿ ಇಟಲಿ ಕವಯಿತ್ರಿ ಇಲ್ಡಾರಿಯ ಜೊವಿನಾಟ್ಸೊ ಅವರ ಸಂದರ್ಶನ ಚೆನ್ನಾಗಿತ್ತು. ಅಕ್ಕಮಹಾದೇವಿ, ಲಲ್ಲೇಶ್ವರಿ ಕುರಿತು ಕೆಲಸ ಮಾಡುತ್ತಿರುವುದನ್ನು ಓದಿ ಸಂತಸವಾಯಿತು. ‘ಪುಟ ಬಂಗಾರ’ದಲ್ಲಿ ಕೀರ್ತಿನಾಥ ಕುರ್ತಕೋಟಿ ಅವರ ಬರಹ ಚಿಂತನಾರ್ಹ.

**ರೇಷ್ಮಾ ಗುಳೇದಗುಡ್ಡಾಕರ್, ಕೊಟ್ಟೂರು**

- ಡಾ. ನಾಗರಾಜು ಜಿ.ಬಿ. ಭೈರೇನಹಳ್ಳಿಯವರ ‘ಒಂಟಿ ಮಾವಿನಮರ’ ಕಣ್ಮನ ಒದ್ದೆಯಾಗಿಸಿದ ಕಥೆ. ಮೊಮ್ಮಗ ಡಾ.ಶಂಕರನ ದುಃಖಭರಿತ ಸ್ವಗತವೂ ನಮ್ಮ ಡಾಕ್ಟರ್ ಮಗನ ಸ್ವಗತವೂ ಒಂದೇ ಆಗಿದ್ದು, ಅಜ್ಜಿಯ ಸಾವಿನ ಸಂದರ್ಭದಲ್ಲಿ ಅಳದೇ, ಆಕೆಯ ಒಡನಾಟವನ್ನು ಮೆಲುಕು ಹಾಕುತ್ತಾ ದುಃಖಿತನಾಗಿ ನಿಂತಿದ್ದನ್ನು ನೆನಪಿಸಿತು.

**ಕೆ.ಎಂ. ರುಕ್ಮಿಣಿ ವೆಂ. ಕುಮಾರ್, ಬೆಂಗಳೂರು.**

- ಡಾ.ಮಿರ್ಜಾ ಬಷೀರ್ ಅವರ ‘ಶವದ ಮೆರವಣಿಗೆ’ ಕಥೆ ವಿಡಂಬನೆಯಿಂದ ಕೂಡಿತ್ತು. ದೇವರು, ಪ್ರವಾದಿ, ಬದುಕು, ಆಸೆ, ಮೋಹದ ಕುರಿತು ಇಂದಿನ ಅನೇಕ ವಾಸ್ತವ ಘಟನೆಗಳನ್ನು ಕಣ್ಣಿಗೆ ಕಟ್ಟುವಂತೆ ಕಥೆಯನ್ನು ನಿರೂಪಿಸಿದ್ದಾರೆ.

**ದೇವೀಂದ್ರಪ್ಪ, ಕನ್ನಡ ವಿಶ್ವವಿದ್ಯಾಲಯ ಹಂಪಿ**